ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಮ್ಎಫ್‌ಸಿ ಹುನಗುಂದ ಇವರ ನ್ಯಾಯಾಲಯದಲ್ಲಿ

ಕ್ರಿಮಿನಲ್ ಮೊಕದ್ದಮೆ ನಂಃ 1297/2018

ಸಿ.ಡಬ್ಲ್ಯೂ-7 ಪಿ.ಡಬ್ಲ್ಯೂ-9

ಸಾಕ್ಷಿಯ ಹೆಸರು ಃ ಯಲ್ಲಪ್ಪ ಮನ್ನಿಕಟ್ಟಿ

ತಂದೆಯ ಹೆಸರು ಃ ಮುನಿಯಪ್ಪ

ವಯಸ್ಸು ಃ 43 ವರ್ಷ

ಉದ್ಯೋಗ ಃ ಪೋಲಿಸ ಪೇದೆ

ವಾಸಸ್ಥಳ ಃ ಅಮೀನಗಡ

ದಿನಾಂಕಃ 22-12-2025 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಸಅ ರವರಿಂದಃ

2012 ರಿಂದ 2018 ವರೆಗೆ ನಾನು ಅಮೀನಗಡ ಪೋಲಿಸ ಠಾಣೆಯಲ್ಲಿ ಪೋಲಿಸ ಪೇದೆ ಅಂತಾ ಕರ್ತವ್ಯನಿರ್ವಹಿಸಿರುತ್ತೇನೆ.

ದಿ. 25-02-2017 ರಂದು ಮದ್ಯಾಹ್ನ 12.00 ಗಂಟೆ ಸುಮಾರಿಗೆ ನಾನು ಠಾಣೆಯಲ್ಲಿ ಕರ್ತವ್ಯದಲ್ಲಿದ್ದಾಗ ಚಾಸಾ-1 ರವರು ನನ್ನ ಮತ್ತು ಚಾಸಾ-6 ರವರನ್ನು ಕರೆಯಿಸಿ ಉಪನಾಳ ಎಸ್.ಸಿ. ಗ್ರಾಮದಲ್ಲಿ ಹಳ್ಳದಲ್ಲಿ ಅನದೀಕೃತವಾಗಿ ಉಸಕನ್ನು ತುಂಬುತ್ತಿದ್ದಾರೆಂದು ಬಾತ್ಮಿ ಬಂದಿರುತ್ತದೆ ಎಂದು ನಮಗೆ ತಿಳಿಸಿ ಚಾಸಾ-6 ರವರಿಗೆ ಪಂಚರನ್ನು ಕರೆತರಲು ಹೇಳಿರುತ್ತಾರೆ. ಅದರಂತೆ ಚಾಸಾ-6 ರವರು ಚಾಸಾ-2 ಮತ್ತು 3 ರವರನ್ನು ಕರೆತಂದು ಚಾಸಾ-1 ರವರ ಮುಂದೆ ಹಾಜರಪಡಿಸಿರುತ್ತಾರೆ. ಚಾಸಾ-2 ಮತ್ತು 3 ರವರಿಗೆ ಚಾಸಾ-1 ರವರು ಬಾತ್ಮಿ ವಿಷಯ ತಿಳಿಸಿ ಅವರು ಪಂಚರಾಗಲು ಒಪ್ಪಿಕೊಂಡ ನಂತರ ನಾನು, ಚಾಸಾ-1 ರಿಂದ 3 ಮತ್ತು ಚಾಸಾ-6 ರವರು ಕೂಡಿ ಸರಕಾರಿ ವಾಹನ ಸಂ.ಕೆಎ-29/ಜಿ-158 ನೇದ್ದರಲ್ಲಿ ಕುಳಿತುಕೊಂಡು ಠಾಣೆಯಿಂದ 12.15 ಕ್ಕೆ ಹೊರಟು ಉಪನಾಳ ಹಳ್ಳದ ಸಮೀಪ ಸ್ವಲ್ಪ ದೂರದಲ್ಲಿ ನಮ್ಮ ವಾಹನವನ್ನು ನಿಲ್ಲಿಸಿ ಕಾಲನಡಿಗೆಯಿಂದ ಬಾತ್ಮಿ ಬಂದ ಸ್ಥಳಕ್ಕೆ ಹೋಗಿ ನೋಡಲಾಗಿ ಅಲ್ಲಿ 4 ಜನ ಉಸಕನ್ನು ಟ್ರ್ಯಾಕ್ಟರನಲ್ಲಿ ತುಂಬುತ್ತಿರುವುದು ಕಂಡು ಬಂದಿತ್ತು. ಅಲ್ಲಿ ಹೋಗಿ ಟ್ರ್ಯಾಕ್ಟರಗಳನ್ನು ನಿಲ್ಲಿಸಿ ಅವುಗಳನ್ನು ತಪಾಸಣೆ ಮಾಡಲಾಗಿ ಅವರ ಹತ್ತಿರ ಉಸುಕು ತುಂಬಲು ಯಾವುದೇ ಪರವಾಣಿಗೆಯನ್ನು ಪಡೆದುಕೊಂಡಿರುವುದಿಲ್ಲ. 4 ಜನರಲ್ಲಿ 3 ಜನ ಓಡಿ ಹೋದರು. 1 ನೇ ಆರೋಪಿಯಿಂದ ಟ್ರ್ಯಾಕ್ಟರ ಚಾವಿಯನ್ನು ಇಸಿದುಕೊಂಡು ಚಾಸಾ-6 ರವರ ತಾಬಾಕ್ಕೆ ತೆಗೆದುಕೊಂಡಿರುತ್ತಾರೆ. 1 ನೇ ಆರೋಪಿತನು ಟ್ರ್ಯಾಕ್ಟರ ಚಾವಿಯನ್ನು ಕೊಡು ಎಂದು ಚಾಸಾ-6 ರವರ ಸಮವಸ್ತ್ರವನ್ನು ಜಗ್ಗಿ ಎಳೆದಾಡಿ ಚಾಸಾ-6 ರವರ ಕಿಸೆಯಲ್ಲಿನ ಚಾವಿಯನ್ನು ಕಸಿದುಕೊಂಡು ಕರ್ತವ್ಯಕ್ಕೆ ಅಡ್ಡಿಪಡಿಸಿ ಟ್ರ್ಯಾಕ್ಟರ ಸಂ.ಕೆಎ-29/ಟಿಎ-8318 ನೇದ್ದನ್ನು ಹಾಗು ಗ್ಲಾಮರ ಬೈಕನ್ನು ಬಿಟ್ಟು

ಸ್ಥಳದಿಂದ ಪರಾರಿಯಾದರು. ನಂತರ ಚಾಸಾ-1 ನಾವು ಹಾಗು ಪಂಚರು ಸೇರಿ ಸ್ಥಳದಲ್ಲಿ ದಿ: 25-02-2017 ರಂದು 1.45 ರಿಂದ 2.45 ಗಂಟೆವರೆಗೆ ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆಯನ್ನು ಮಾಡಿ 2 ಕೆ.ಜಿ. ಮರಳನ್ನು ರಸಾಯನಿಕ ಪರೀಕ್ಷೆಗಾಗಿ ತೆಗೆದು ಸೀಲ ಹಾಕಿ ಸಹಿ ಮಾಡಿರುತ್ತೇವೆ. ಸದರಿ ಟ್ರ್ಯಾಕ್ಟರ ಸಂ.ಕೆಎ-29/ಟಿಎ 8318 ನೇದ್ದನ್ನು ಹಾಗು ಗ್ಲಾಮರ ಬೈಕನ್ನು ಚಾಸಾ-1 ರವರು ಜಪ್ತುಪಡಿಸಿಕೊಂಡು ಠಾಣೆಗೆ ತೆಗೆದುಕೊಂಡು ಬಂದು ಚಾಸಾ-1 ರವರು ಫಿರ್ಯಾದಿಯನ್ನು ದಾಖಲಿಸಿರುತ್ತಾರೆ. ಸಂಜೆ 5.00 ಗಂಟೆ ಸುಮಾರಿಗೆ ಚಾಸಾ-4 ಮತ್ತು 5 ರವರ ಸಮಕ್ಷಮ ಚಾಸಾ-6 ರವರ ಸಮವಸ್ತ್ರವನ್ನು ಚಾಸಾ-13 ರವರು ಜಪ್ತಿಪಡಿಸಿಕೊಂಡು ಪಂಚರ ಸಹಿ ಮಾಡಿ ಸೀಲ ಹಾಕಿರುತ್ತಾರೆ. ಈ ಕುರಿತು ನನ್ನ ಹೇಳಿಕೆಯನ್ನು ಚಾಸಾ-13 ರವರ ಮುಂದೆ ನೀಡಿರುತ್ತೇನೆ. ದಿ: 23-03-2017 ರಂದು ಆರೋಪಿತರು ಜಾಮೀನು ತೆಗೆದುಕೊಂಡು ಠಾಣೆಗೆ ಹಾಜರಾದ ಮೇರೆಗೆ ಆರೋಪಿತರನ್ನು ನೋಡಿ ಗುರುತಿಸಿ ಅವರ ಹೆಸರನ್ನು ಕೇಳಿ ತಿಳಿದುಕೊಂಡಿರುತ್ತೇನೆ. ಕೃತ್ಯಕ್ಕೆ ಉಪಯೋಗಿಸಿದ ಟ್ರ್ಯಾಕ್ಟರಕ್ಕೆ ಜೋಡಿಸಿದ ಟ್ರೇಲರ ಸಂಖ್ಯೆ ಹಾಗು ದ್ವಿಚಕ್ರ ವಾಹನ ಸಂಖ್ಯೆ 1005 ನೇದ್ದವುಗಳನ್ನು ದಿ: 23-03-2017 ರಂದು ಚಾಸಾ-13 ರವರ ಮುಂದೆ ಗ್ಲಾಮರ ಗಾಡಿಯ ಚೆಸ್ಸಿ ನಂಬರನ್ನು ಹಾಗು ಆರೋಪಿತರನ್ನು ಗುರುತಿಸಿದ ಬಗ್ಗೆ ಪುನ: ಹೇಳಿಕೆಯನ್ನು ನೀಡಿರುತ್ತೇನೆ. ಆರೋಪಿತರು ಹಲ್ಲೆ ಮಾಡಿ ಚಾಸಾ-6 ರವರ ಜೇಬನ್ನು ಹರಿದು ಕರ್ತವ್ಯಕ್ಕೆ ಅಡ್ಡಿಪಡಿಸಿದ ಚಾಸಾ-6 ರವರ ಸಮವಸ್ತ್ರವನ್ನು ನೋಡಿದರೆ ನಾನು ಗುರುತಿಸಬಲ್ಲೆ. ಸಾಕ್ಷಿ ಚಾಸಾ-6 ರವರ ಸಮವಸ್ತ್ರವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಎಮ್.ಓ-2 ಎಂದು ಗುರುತಿಸಲಾಗಿರುತ್ತದೆ. ಕೃತ್ಯಕ್ಕೆ ಬಳಿಸಿದ ಟ್ರ್ಯಾಕ್ಟರ ಹಾಗು ಗ್ಲಾಮರ ಬೈಕನ್ನು ನಾನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಕಡತದಲ್ಲಿರುವ ಎರಡು ಛಾಯಾಚಿತ್ರಗಳನ್ನು ನೋಡಿ ಇವೆ ಕೃತ್ಯಕ್ಕೆ ಬಳಸಿದ ಟ್ರ್ಯಾಕ್ಟರ ಹಾಗು ಗ್ಲಾಮರ ಬೈಕ ಎಂದು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಈಗ ನಿಪಿ-10 ಮತ್ತು ನಿಪಿ-11 ಎಂದು ಗುರುತಿಸಲಾಯಿತು. ರೇಡ ಕಾಲಕ್ಕೆ ಶ್ಯಾಂಪಲಗಾಗಿ ತೆಗೆದ ಮರಳನ್ನು ನೋಡಿದರೆ ನಾನು ಗುರುತಿಸಬಲ್ಲೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಶ್ಯಾಂಪಲಗಾಗಿ ತೆಗೆದ ಮರಳನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಎಮ್.ಓ-1 ಎಂದು ಗುರುತಿಸಲಾಗಿರುತ್ತದೆ. ಆರೋಪಿತರನ್ನು ನಾನು ನೋಡಿದರೆ ಗುರುತಿಸಬಲ್ಲೆ. ನ್ಯಾಯಾಲಯದ ಮುಂದೆ ಇರುವ 1, 2 ಮತ್ತು 4 ನೇ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. 3 ನೇ ಆರೋಪಿತನು ಈ ದಿನ ನ್ಯಾಯಾಲಯದ ಮುಂದ ಗೈರ ಹಾಜರಿದ್ದು ಆತನ ಗುರುತಿಸುವಿಕೆಗೆ ಆರೋಪಿತರ ಪರ ವಕೀಲರು ಯಾವುದೇ ತಕರಾರು ಮಾಡಿರುವುದಿಲ್ಲ.

<u>ಪಾಟೀಸವಾಲು: **1** ರಿಂದ **4** ನೇ</u> ಆರೋಪಿತರ ಪರ ಶ್ರೀ. ಬಿ.ಎನ್.ಎಮ್. ವಕೀಲರಿಂದ:

ಗುಡೂರನಲ್ಲಿ ಹೊರ ಪೋಲಿಸ ಠಾಣೆ ಇರುತ್ತದೆ ಎಂದರೆ ಸರಿ. ಘಟನೆ ನಡೆದಾಗ ನಾನು ಅಮೀನಗಡ ಪೋಲಿಸ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಚಾಸಾ-6 ರವರು ಪಂಚರನ್ನು 12.05 ಗಂಟೆಗೆ ಕರೆತರಲು ಹೋಗಿ 12.15 ಗಂಟೆಗೆ ಪಂಚರನ್ನು ಕರೆತಂದು ಚಾಸಾ-1 ರವರ ಮುಂದೆ ಹಾಜರಪಡಿಸಿರುತ್ತಾರೆ. ಪಂಚರ ಹೆಸರು ಮತ್ತು ವಿಳಾಸವನ್ನು ನಾನು ಹೇಳಬಲ್ಲೆ. ಒಬ್ಬ ರಾಜು ರಾಠೋಡ ಹಾಗು ಇನ್ನೊಬ್ಬ ಗಿರೀಶ ರಾಠೋಡ ಅಂತಾ ಇಬ್ಬರು ಅಮೀನಗಡದವರು ಇರುತ್ತಾರೆ. ಚಾಸಾ-6 ರವರು ಪಂಚರನ್ನು ಕರೆತಂದು ಚಾಸಾ-1 ರವರ ಮುಂದೆ ಹಾಜರಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಗುನ್ಹೆ ಜಾಗಕ್ಕೆ ಯಾವ ಮಾರ್ಗದ ಮುಖಾಂತರ ಹೋಗಿರುತ್ತೀರಾ ಎಂದರೆ ಸಾಕ್ಷಿ ಅಮೀನಗಡ ದಿಂದ ಗುಡೂರ, ಗುಡೂರ ದಿಂದ ಉಪನಾಳ ಎಸ್.ಸಿ ಗ್ರಾಮಕ್ಕೆ ಹೋಗಿರುತ್ತೇವೆ. ಅಮೀನಗಡ ದಿಂದ ಗುನ್ಹೆ ಸ್ಥಳ ನಾವು ಹೋಗಿದ ಮಾರ್ಗ ಅಂದಾಜು 20 ರಿಂದ 22 ಕಿ.ಮೀ.ಆಗಬಹುದು. ಅಮೀನಗಡ ಠಾಣೆಯಿಂದ 12.15 ಕ್ಕೆ ಹೊರಟು ಗುನ್ಹೆ ಸ್ಥಳಕ್ಕೆ 1.00 ಗಂಟೆಗೆ ತಲುಪಿರುತ್ತೇವೆ. ನಮ್ಮ ವಾಹನವನ್ನು ಗುನ್ಹೆ ಸ್ಥಳದಿಂದ ಸ್ವಲ್ಪ ಮರೆಯಲ್ಲಿ ನಿಲ್ಲಿಸಿರುತ್ತೇವೆ. ನಮ್ಮ ವಾಹನವನ್ನು ಗುನ್ಹೆ ಸ್ಥಳದಿಂದ ಅಂದಾಜು 50 ರಿಂದ 80 ಮೀಟರ ಅಂತರದಲ್ಲಿ ನಿಲ್ಲಿಸಿರುತ್ತೇವೆ. ಆರೋಪಿತರ ಮೇಲೆ ನಿಗಾವಣೆ ವಹಿಸಿದ ನಂತರ ದಾಳಿಯನ್ನು ಮಾಡಿರುತ್ತೇವೆ. ಆರೋಪಿತರನ್ನು 30 ಮೀ. ಅಂತರದಿಂದ ನಿಗಾವಣೆ ಮಾಡಿರುತ್ತೇವೆ. ಆರೋಪಿತರನ್ನು 2 ರಿಂದ 3 ನಿಮಿಷದ ಅವದಿವರೆಗೆ ನಿಗಾವಣೆ ಮಾಡಿರುತ್ತೇವೆ. ನಾವೆಲ್ಲರು ಸೇರಿ ಆರೋಪಿತರ ನಿಗಾವಣೆ ಮಾಡಿರುತ್ತೇವೆಂದರೆ ಸರಿ. ಆರೋಪಿತರು ಟ್ರ್ಯಾಕ್ಟರನ್ನು ಪರಸಪ್ಪ ಪೂಜಾರಿ ಇವರ ಜಮೀನಿನ ಕಡೆ ಮುಖ ಮಾಡಿ ಪಶ್ಚಿಮ ದಿಕ್ಕಿಗೆ ನಿಲ್ಲಿಸಿದ್ದರು. ( ಈ ಹಂತದಲ್ಲಿ ಆರೋಪಿತರು ಯಾವ ದಿಕ್ಕಿನಲ್ಲಿ ನಿಂತು ಯಾರು ಯಾರು ಮರಳನ್ನು ತುಂಬುತ್ತಿದ್ದರು ಎಂದು ಸಾಕ್ಷಿಗೆ ಪ್ರಶ್ನೆಯನ್ನು ಕೇಳಿರುತ್ತಾರೆ. ಸದರಿ ಪ್ರಶ್ನೆ ಪ್ರಸ್ತುತ ಪ್ರಕರಣಕ್ಕೆ ಅಸಂಬಂದವಾದ ಕಾರಣ ತೀರಸ್ಕರಿಸಲಾಗಿದೆ). ಆರೋಪಿತರು ಯಾವುದೇ ಮರಳನ್ನು ತುಂಬುತ್ತಿರಲಿಲ್ಲ ಆರೋಪಿತರು ಟ್ರ್ಯಾಕ್ಟರನ್ನು ಪಶ್ಚಿಮ ದಿಕ್ಕಿಗೆ ಮುಖಮಾಡಿ ನಿಲ್ಲಿಸಿ ಮರಳು ತುಂಬುತ್ತಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ-6 ರವರು ಓಡಿ ಹೋಗಿ ಟ್ರ್ಯಾಕ್ಟರ ಚಾವಿಯನ್ನು ಕಸಿದುಕೊಂಡಿರುತ್ತಾರೆ. ಚಾಸಾ-6 ರವರು ನಮ್ಮಿಂದ 20 ರಿಂದ 30 ಮೀ. ಅಂತರದಲ್ಲಿ ನಮ್ಮ ಮುಂದೆ ಓಡಿ ಹೋಗಿ ಚಾವಿಯನ್ನು ಕಸಿದುಕೊಂಡಿರುತ್ತಾರೆ. ಟ್ರ್ಯಾಕ್ಟರ ಚಾವಿಯನ್ನು ತೆಗೆದುಕೊಂಡು ಚಾಸಾ-6 ರವರು ತಮ್ಮ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. 4 ಜನ ಆರೋಪಿತರು ಚಾಸಾ-6 ರವರ ಸಮವಸ್ತ್ರವನ್ನು ಜಗ್ಗಾಡಿ ಎಳೆದಾಡಿ ಟ್ರ್ಯಾಕ್ಟರ ಚಾವಿಯನ್ನು ಕಸಿದುಕೊಂಡು ಓಡಿಹೋಗಿರುತ್ತಾರೆ. 4 ಜನ ಆರೋಪಿತರು ಚಾಸಾ-6 ರವರ ಸಮವಸ್ತ್ರವನ್ನು ಎಳೆದಾಡಿ ಜಗ್ಗಾಡಿ ಟ್ರ್ಯಾಕ್ಟರ

ಚಾವಿಯನ್ನು ಕಸಿದುಕೊಂಡು ಓಡಿಹೋಗಿರುತ್ತಾರೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಸಮವಸ್ತ್ರ ಚಾಸಾ-6 ರವರ ಸಮವಸ್ತ್ರ ಅಲ್ಲ ಎಂದರೆ ಸರಿಯಲ್ಲ. ನನ್ನ ಹಾಗು ಪಂಚರ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಅಲ್ಲಿ ಯಾವುದೇ ರೀತಿ ಅಕ್ರಮವಾಗಿ ಮರಳನ್ನು ಆರೋಪಿತರು ತುಂಬುತ್ತಿರಲಿಲ್ಲ ಠಾಣೆ ಅಂಕಿಸಂಖ್ಯೆಗೋಸ್ಕರ ಚಾಸಾ-1 ರವರ ಸುಳ್ಳು ಪಿರ್ಯಾದಿ ನೀಡಿರುತ್ತಾರೆ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಹುನಗುಂದ.